

ಸೌರವ್ಯೂಹದ ಒಂದು ಪಕ್ಷಿನೋಟ. ಕ್ಷುದ್ರಗ್ರಹಗಳ ಪಟ್ಟಿಯಲ್ಲಿ ಅನೇಕ ಕ್ಷುದ್ರಗ್ರಹಗಳನ್ನು ಕಾಣಬಹುದು. ಚಿತ್ರಕೃಪೆ: ನಾಸಾ



ಲೂಸಿ ನೌಕೆಯನ್ನು ಹೊತ್ತು ಆಗಸಕ್ಕೇರುತ್ತಿರುವ ಅಮೆರಿಕದ ಅಟ್ಲಾಸ್ 5 ರಾಕೆಟ್.
ಚಿತ್ರಕೃಪೆ: ಯು.ಎಲ್.ಎ. (ಅಮೆರಿಕ)

ನುಡಿಯುತ್ತಾರೆ. ಅವರ ಪ್ರಕಾರ ಮುಂದೂ ಸಹ ವಿವಿಧ ಗಾತ್ರದ ಕ್ಷುದ್ರಗ್ರಹಗಳು ಭೂಮಿಗೆ ಬಂದಪ್ಪಳಿಸುವ ಸಾಧ್ಯತೆ ಇದ್ದೇ ಇದೆ.

ಇದೇ ವರ್ಷದ ಅಕ್ಟೋಬರ್ 17ರಂದು ಸುಮಾರು ಬಸ್ ಒಂದರಷ್ಟಿರುವ ಕ್ಷುದ್ರಗ್ರಹವೊಂದು (ಇದನ್ನು ಕ್ಷುದ್ರಗ್ರಹದ 'ಚೂರು' ಎನ್ನುವುದು ಹೆಚ್ಚು ಸಮಂಜಸ) ಭೂಮಿಯಿಂದ ಕೇವಲ ಎರಡೂವರೆ ಲಕ್ಷ ಕಿಲೋಮೀಟರ್ ಅಂತರದಲ್ಲಿ ಶರವೇಗದಲ್ಲಿ ಹಾದುಹೋಯಿತು ಎಂದು ಅಮೆರಿಕದ ಅಂತರಿಕ್ಷ ಸಂಸ್ಥೆ 'ನಾಸಾ' ಹೇಳಿದೆ ಎಂದು ವರದಿಯಾಗಿತ್ತು. ಅಂತೂ ಭೂಮಿ ಆ ಕ್ಷುದ್ರಗ್ರಹದಿಂದ ತಪ್ಪಿಸಿಕೊಂಡಿತು.

ಇದಕ್ಕೆ ಹೋಲಿಸಿದಲ್ಲಿ ನಮ್ಮ ಚಂದ್ರನೇ ಆ ಅಂತರಕ್ಕಿಂತ ಹೆಚ್ಚು ದೂರದಲ್ಲಿ ಅಂದರೆ ಇಲ್ಲಿಂದ ಹತ್ತಿರ ಹತ್ತಿರ ನಾಲ್ಕು ಲಕ್ಷ ಕಿಲೋಮೀಟರ್ ದೂರದಲ್ಲಿ ಇದ್ದಾನೆ.

ಸಸ್ತನಿಗಳೆಂಬ ಜೀವಿಗಳ ಗುಂಪಿಗೆ ಸೇರಿದ ಮಾನವ ಇಂದು ಭೂಮಿಯ ಪ್ರಬಲಜೀವಿಯಾಗಿದ್ದಾನೆ. ಭೂಮಿಯ ಇತರ ಜೀವಿಗಳಿಗಿಲ್ಲದ ಅಪಾರವಾದ ಬುದ್ಧಿಶಕ್ತಿ ಮಾನವನಿಗಿದೆ. ಅದನ್ನು ಬಳಸಿಕೊಂಡು ಈಗಾಗಲೇ ಮಾನವ ಪ್ರಕೃತಿ ಉಂಟುಮಾಡುವ ಕಷ್ಟಗಳನ್ನು ಅನಾಹುತಗಳನ್ನು ನಿಭಾಯಿಸಲು ಸಾಕಷ್ಟು ಸಮರ್ಥನಾಗಿದ್ದಾನೆ.

## ಲೂಸಿ ಅಂತರಿಕ್ಷನೌಕೆ

ಕ್ಷುದ್ರಗ್ರಹದಂತಹ ಪುಟ್ಟ ಆಕಾಶಕಾಯಗಳು ಭೂಮಿಯನ್ನಪ್ಪಳಿಸಲು ಬರುವ ಭೀತಿಯನ್ನು ಸಮರ್ಥವಾಗಿ ಹೇಗೆ ಎದುರಿಸುವುದೆಂಬ ಬಗ್ಗೆ ಇನ್ನೂ ಹೆಚ್ಚಿನ ಒಮ್ಮತ ವಿಜ್ಞಾನಿಗಳಲ್ಲಿ ಮೂಡಿಲ್ಲ. ಅದಕ್ಕೆ ಪೂರ್ವಭಾವಿಯಾಗಿ ವೈಜ್ಞಾನಿಕವಾಗಿಯೂ ಕುತೂಹಲಕಾರಿಯಾದ ಕ್ಷುದ್ರಗ್ರಹಗಳ ವಿವಿಧ ಅಂಶಗಳನ್ನು ಕೂಲಂಕಷವಾಗಿ ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ಇದಕ್ಕಾಗಿ ಅನೇಕ ರೋಬಾಟ್ ಅಂತರಿಕ್ಷ ನೌಕೆಗಳನ್ನು ಈಗಾಗಲೇ ಉಡಾಯಿಸಲಾಗಿದೆ. ಈ ನಿಟ್ಟಿನಲ್ಲಿ ಇತ್ತೀಚೆಗೆ, ಅಂದರೆ ಈ ಅಕ್ಟೋಬರ್ 16ರಂದು ಅಮೆರಿಕದ ಅಂತರಿಕ್ಷ ಸಂಸ್ಥೆ ನಾಸಾ 'ಲೂಸಿ' ಎಂಬ ರೋಬಾಟ್ ನೌಕೆಯನ್ನು ಉಡಾಯಿಸಿದೆ.

ಭೂಮಿಯಿಂದ ಕೋಟ್ಯಂತರ ಕಿಲೋಮೀಟರ್ ದೂರದಲ್ಲಿರುವ ಎಂಟು ಕ್ಷುದ್ರಗ್ರಹಗಳಿಗೆ



ಅಮೆರಿಕದ ಅರಿಝೋನಾದಲ್ಲಿ ಕ್ಷುದ್ರಗ್ರಹದ ತುಂಡೊಂದು ಸಾವಿರಾರು ವರ್ಷಗಳ ಹಿಂದೆ ಅಪ್ಪಳಿಸಿದರಿಂದಾದ ಕುಳಿ.
ಚಿತ್ರಕೃಪೆ: ಅಮೆರಿಕದ ಭೂಗರ್ಭ ಮಾಪನ ಸಂಸ್ಥೆ